# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.29/2021

C.W.7
P.W. 7

ದಿನಾಂಕಃ 13-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಸಿದ್ದರಾಜು |
| ತಂದೆಯ ಹೆಸರು | ಃ ಗಂಗನರಸಯ್ಯ |
| ವಯಸ್ಸು | ಃ 39 ವರ್ಷ |
| ಉದ್ಯೋಗ | ಃ ಗಾರೆ ಕೆಲಸ |
| ವಾಸ | ಃ ದೊಡ್ಡಸಾರಂಗಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-18 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-18(ಸಿ ) ಎಂದು ಗುರುತಿಸಲಾಯಿತು.

2) ದಿ 24.08.2020 ರಂದು ಸುಮಾರು 11 ಗಂಟೆ ಸಮಯದಲ್ಲಿ ತುಮಕೂರು ಜಿಲ್ಲಾಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಅಂಜಲಿಯವರ ಶವತನಿಖಾ ಸಮಯದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ .ಆಕೆಯ

ಮೃತದೇಹವು ಊದಿಕೊಂಡಿದ್ದು, ಅಲ್ಲಿ ಹಾಜರಿದ್ದ ಪೊಲೀಸರು ಮೃತೆಯನ್ನು ರೇಪ್ ಮಾಡಿ ಸಾಯಿಸಿರಬಹುದೆಂದು ಮಾತನಾಡಿಕೊಳ್ಳುತ್ತಿದ್ದರು. ಸದರಿ ಸ್ಥಳದಲ್ಲಿ ನಿಪಿ-18 ರಂತೆ ಶವಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-19 ರಲ್ಲಿ ಇರುವ ಪೊಟೋವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದರಲ್ಲಿ ತಮ್ಮ ಭಾವಚಿತ್ರ ವಿರುವುದಾಗಿ ಒಪ್ಪಿರುತ್ತಾರೆ. ಶವಗಾರದಲ್ಲಿ ಪೊಲೀಸರು ನಿಪಿ-18 ನ್ನು ಟೈಪ್ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಚಾಸಾ-6 ಸಹ ನನ್ನೊಂದಿಗೆ ಸಹಿ ಮಾಡಿರುತ್ತಾರೆ.

ಪಾಟೀ ಸವಾಲುಃ **1** ಮತ್ತು **4** ನೇ ಆರೋಪಿಗಳ ಪರ ಶ್ರೀಬಿ ಕೆ ಪಿ ಎಸ್ ವಕೀಲರಿಂದಃ

3) ನನಗೆ ಆಸ್ಪತ್ರೆಯ ಬಳಿ ಬರಲು ಪೊಲೀಸರು ನೋಟೀಸ್ ಕೊಟ್ಟಿರುವುದಿಲ್ಲ, ಆದರೆ ಪೋನ್ ಮಾಡಿರುತ್ತಾರೆ . ನನಗೆ ಪೋನ್ ಮಾಡಿದ ಪೊಲೀಸರು ಕೆಂಪರಾಜು. ಪೊಲೀಸರು ಗ್ರಾಮಪಂಚಾಯತಿ ಸದಸ್ಯರಿಗೆ ಪೋನ್ ಮಾಡಿ ನನಗೆ ಬರಲು ಹೇಳಿರುತ್ತಾರೆ, ಆದರೆ ನನಗೆ ಖುದ್ದಾಗಿ ಪೋನ್ ಮಾಡಿರುವುದಿಲ್ಲ . ಗ್ರಾಮಪಂಚಾಯತಿ ಸದಸ್ಯರು ನನಗೆ ಬೆಳಗ್ಗೆ 9.30 ಯಿಂದ 10 ಗಂಟೆ ಸಮಯದಲ್ಲಿ ತಿಳಿಸಿದ್ದು, ನಾನು ಸುಮಾರು 11 ರಿಂದ 11.30 ಸಮಯಕ್ಕೆ ಆಸ್ಪತ್ರೆಯ ಬಳಿ ಹೋಗಿರುತ್ತೇನೆ, ಆಗ ಪೊಲೀಸರು ಮತ್ತು ಸಾಹೇಬರು ಇದ್ದರು. ನಾನು ಆಸ್ಪತ್ರೆಗೆ ಹೋದ ತಕ್ಷಣ ಅವರೇ ನನ್ನನ್ನು ಪರಿಚಯ ಮಾಡಿಕೊಂಡರು. ಲ್ಯಾಪ್ ಟಾಪ್ ನಲ್ಲಿ ಪಂಚನಾಮೆ ಟೈಪ್ ಮಾಡಿದರು, ಆದರೆ ಅವರ ಹೆಸರು ಹೇಳಲು ಬರುವುದಿಲ್ಲ. ನಿಪಿ-18 ರಲ್ಲಿ ಏನೇನು ಟೈಪ್ ಮಾಡಿದೆ ಎಂದು ನನಗೆ ಹೇಳಲು ಬರುವುದಿಲ್ಲ

ಅಂದರೆ ಸರಿ. ಗ್ರಾಮಪಂಚಾಯತಿಯ ಸದಸ್ಯರ ಕೋರಿಕೆಯ ಮೇರೆಗೆ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ ಅಂದರೆ ಸರಿ. ಆತ್ಯಾಚಾರ ಯಾರು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ . ಮೃತ ಅಂಜಲಿ ಸ್ವಾಭಾವಿಕವಾಗಿ ಮೃತಪಟ್ಟಳೋ ಅಥವಾ ಅಸ್ವಾಭಾವಿಕವಾಗಿ ಮೃತಪಟ್ಟಳೋ ನನಗೆ ಗೊತ್ತಿಲ್ಲ ಅಂದರೆ ಸರಿ. ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

( ಉಳಿದ ಆರೋಪಿಗಳ ಪರ ವಕೀಲರು 1. ಮತ್ತು 4 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಆಳವಡಿಸಿಕೊಳ್ಳಲು ಕೋರಿದ್ದಾರೆ.)

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು